ಶಾಸಕರು ಭಾಗವಹಿಸಿ ಸರ್ಕಾರಕ್ಕೆ ಫಲಾನುಭವಿಗಳನ್ನು ಆಯ್ಕೆ ಮಾಡಿ ಕೊಟ್ಟರೆ ಸರ್ಕಾರಕ್ಕೂ ಒಳ್ಳೆಯದಾಗುತ್ತದೆ, ಇಲಾಖೆಗೂ ಒಳ್ಳೆಯದಾಗುತ್ತದೆ, ಈ ರೀತಿ ಅವ್ಯವಹಾರ ನಡೆಯುವುದಕ್ಕೆ ಆಸ್ಪದವೂ ಇರುವುದಿಲ್ಲ. ಮಾನ್ಯ ಸದಸ್ಯರೆಲ್ಲರಿಗೂ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ದಯಮಾಡಿ ಗ್ರಾಮ ಸಭೆಯಲ್ಲಿ ಅವರೂ ಕೂಡ ಭಾಗವಹಿಸಿ ಫಲಾನುಭವಿಗಳನ್ನು ಆಯ್ಕೆ ಮಾಡಬೇಕೆಂದು ಕೋರುತ್ತೇನೆ. ಇಂಡಾಫ್ ರಾಗಿ ಬಗ್ಗೆ ನಮ್ಮ ಇಲಾಖಾ ವ್ಯಾಪ್ತಿಗೆ ಬರುವುದಿಲ್ಲ. ವ್ಯವಸಾಯ ಮಂತ್ರಿಗಳು ಅದಕ್ಕೆ ಉತ್ತರಿಸುತ್ತಾರೆ.

ಅಧ್ಯಕ್ಷರು:- ಈಗ ಪ್ರಶ್ನೋತ್ತರ ಮುಗಿಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾಗುವ ಉತ್ತರಗಳು.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, ದಿನಾಂಕ 12.7.96ರ 6ನೇ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 57 ಪ್ರಶ್ನೆಗಳ ಪೈಕಿ 43 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ವಿಷಯ:- ಹಿರೇಕೆರೂರು ಡಿಪೋದಿಂದ ರಾಜ್ಯದ ರಸ್ತೆ ಸಾರಿಗೆ ಬಸ್‌ಗಳ ಟ್ರಿಪ್‌ಗಳನ್ನು 1-6-96ರಿಂದ 20-6-96ರಲ್ಲಿ ರದ್ದುಗೊಳಿಸಿರುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 216 (107)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) 1-6-96ರಿಂದ 20-6-96ರವರೆಗೆ ಹಿರೇಕೆರೂರು ಡಿಪೋದಿಂದ ಪ್ರತಿ ದಿವಸ ರದ್ದಾದ ಅನುಸೂಚಿಗಳು ಎಷ್ಟು? ಅವು ಯಾವುವು, ಪೂರ್ತಿಯಾಗಿ ಓಡಿಸದ ಅನುಸೂಚಿಗಳು ಎಷ್ಟು? ಪ್ರತಿ ದಿವಸ ಒಂದು ಗಂಟೆಗಿಂತ ತಡವಾಗಿ ಹೋದ ಅನುಸೂಚಿಗಳು ಎಷ್ಟು? ಅವು ಯಾವುವು? ತಡವಾಗಿ ಹೋಗಲು ಕಾರಣ ಏನು?

ಶ್ರೀ ಪಿ.ಜಿ.ಆರ್.ಸಿಂದ್ಯಾ (ಸಾರಿಗೆ ಸಚಿವರು):-

ಅ) 1. ಒಟ್ಟು 74 ಅನುಸೂಚಿಗಳನ್ನು ಸಂಪೂರ್ಣವಾಗಿ ಆಚರಣೆ ಮಾಡಿರುವುದಿಲ್ಲ. ಪ್ರತಿ ದಿವಸದ ವಿವರಗಳು ಅನುಬಂಧ 'ಎ'ನಲ್ಲಿದೆ.

2. ಒಟ್ಟು 80 ಅನುಸೂಚಿಗಳನ್ನು ಭಾಗಶಃ ಆಚರಣೆ ಮಾಡಲಾಗಿದೆ. ಪ್ರತಿ ದಿವಸದ ವಿವರಗಳು ಅನುಬಂಧ 'ಬಿ'ನಲ್ಲಿದೆ.

3. ಒಟ್ಟು 270 ಅನುಸೂಚಿಗಳನ್ನು ತಡವಾಗಿ ಆಚರಣೆ ಮಾಡಲಾಗಿದೆ. ಪ್ರತಿ ದಿವಸದ ವಿವರಗಳು ಅನುಬಂಧ 'ಸಿ'ನಲ್ಲಿದೆ.

ತಡವಾದ ನಿರ್ಗಮನಗಳಿಗೆ ಕಾರಣಗಳು, ನಿರ್ವಾಹಕರ ಕೊರತೆ ಮತ್ತು ವಾಹನ ದುರಸ್ತಿ.